# ಉತ್ತರ ಕರ್ನಾಟಕ ಭಾಗದ ಹವಾಮಾನ ಮತ್ತು ಕೃಷಿ ಹವಾಮಾನ ಸಲಹಾ ಪ್ರಕಟಣೆ

**31 ಆಗಸ್ಟ 2021**




ನೀಡುವವರು

**ಉತ್ತರ ಕರ್ನಾಟಕ ಕೃಷಿ ಹವಾಮಾನ ಮುನ್ಸೂಚನೆ ಮತ್ತು ಸಂಶೋಧನಾ ಕೇಂದ್ರ (NKAFC),**

**ಭಾರತ ಹವಾಮಾನ ಇಲಾಖೆ, ಧಾರವಾಡ**

ಸಹಯೋಗದೊಂದಿಗೆ

**ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC), ಬೆಂಗಳೂರು**

**ಕೃಷಿ ಇಲಾಖೆ, ಕರ್ನಾಟಕ ಸರಕಾರ**

ಮತ್ತು

**ಕೃಷಿ ಹವಾಮಾನಶಾಸ್ತ್ರ ವಿಭಾಗ**

**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

## ಸಾರಾಂಶ

**ಗಮನಿಸಲಾದ ಹವಾಮಾನ (ಆಗಸ್ಟ್ 19 ರಿಂದ 31 ರವರೆಗೆ)**

- ಗರಿಷ್ಟ ತಾಪಮಾನದ: 24 - 32$^0$C ಕನಿಷ್ಟ ತಾಪಮಾನ: 18 – 25$^0$C
- ಗರಿಷ್ಟ ತೇವಾಂಶ: 90 - 100% ಕನಿಷ್ಟ ತೇವಾಂಶ: 80 –90% ಗಾಳಿಯ ವೇಗ: 1– 8 kmph ಮೋಡದ ಹೊದಿಕೆ: 1 – 8 Okta

**ಹವಾಮಾನ ಮುನ್ಸೂಚನೆ: (ಸೆಪ್ಟೆಂಬರ್ 1 ರಿಂದ 5 ರ ವರೆಗೆ)**

- ಮುಂದಿನ 5 ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಅಲ್ಲಲ್ಲಿ ಸಣ್ಣ ಪ್ರಮಾಣದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ
- ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂದಿನ 5 ದಿನಗಳಲ್ಲಿ ಬಹುತೇಕ ಮಳೆಯಾಗುವ ಸಾಧ್ಯತೆಯಿದ್ದು ಸೆಪ್ಟೆಂಬರ್ 5 ರಂದು ಅಲ್ಲಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆಯಿರುವುದರಿಂದ ಯೆಲ್ಲೊ ಅಲರ್ಟ ನೀಡಲಾಗಿದೆ
- ಮುಂದಿನ 5 ದಿನಗಳ ಕಾಲ ಬಹುತೇಕ ಕಡೆ ಅಧಿಕ ತೇವಾಂಶ ಹಾಗೂ ಮೋಡ ಕವಿದ ವಾತಾವರಣವಿರಲಿದೆ

**ಹವಾಮಾನ ಆಧಾರಿತ ಬೆಳೆಯ ಸಲಹೆಗಳು**

- ಅತೀ ಹೆಚ್ಚು ಮಳೆಯಾದ ಬೀದರ, ಕಲಬುರ್ಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಬಸಿಗಾಲುವೆಗಳನ್ನು ನಿರ್ಮಿಸಿ ನೀರನ್ನು ಹೊರಹಾಕಬೇಕು
- ಮುಂಚಿತವಾಗಿ ಬಿತ್ತನೆಯಾದ ಹೆಸರು ಕೊಯ್ಲಿನ ಹಂತದಲ್ಲಿದ್ದು ಮಳೆಯ ವಾತಾವರಣ ನೋಡಿಕೊಂಡು ಕೊಯ್ಲು ಮಾಡುವುದು ಒಳ್ಳೆಯದು
- ಈಗಾಗಲೇ ಕೊಯ್ಲಾದ ಹೆಸರಿನ ಕಾಳುಗಳನ್ನು ನೀರು ತಾಗದಂತೆ ಸುರಕ್ಷಿತ ಜಾಗದಲ್ಲಿ ಮುಚ್ಚಿಡಬೇಕು
- ಮಳೆಯ ಪ್ರಮಾಣ ಕಡಿಮೆಯಾಗಿದ್ದಲ್ಲಿ ಬೆಳೆಗೆ ಅನುಸಾರವಾಗಿ ನೀರನ್ನು ಕೊಡಬಹುದು
- ಸೂರ್ಯಕಾಂತಿ ಹಾಗೂ ತೃಣ ಧಾನ್ಯದ ಬೆಳೆಗಳ ಬಿತ್ತನೆಯನ್ನು ಮುಂದುವರೆಸಬಹುದು
- ಮೇಲು ಗೊಬ್ಬರವನ್ನು ಮಣ್ಣಿನ ತೇವಾಂಶ ಹದವಾಗಿರುವಾಗ ನೀಡಬಹುದು
- ಸಸ್ಯ ಸಂರಕ್ಷಣಾ ಕ್ರಮಗಳನ್ನು ಒಣ ಹವೆಯಿದ್ದಾಗ ಹಾಗೂ ಗಾಳಿಯ ವೇಗ ಕಡಿಮೆ ಇದ್ದಾಗ ಅಂಟು ದ್ರಾವಣದೊಂದಿಗೆ ಕೈಗೊಳ್ಳಿ
- ಮಳೆಯ ನೀರನ್ನು ಆದಷ್ಟು ಮಳೆನೀರು ಕೊಯ್ಲಿನ ಮುಖಾಂತರ ಅಥವಾ ಕೃಷಿ ಹೊಂಡಗಳಲ್ಲಿ ಶೇಖರಿಸಿ ಇಡುವುದರಿಂದ ಒಣ ಪರಿಸ್ಥಿತಿಯಲ್ಲಿ ಉಪಯೋಗಿಸಲು ಅನುಕೂಲವಾಗುವುದು
- ಬೆಳೆಯುವ ಹಂತದಲ್ಲಿರುವ ತೋಟಗಾರಿಕೆ ಹಾಗೂ ಹಣ್ಣಿನ ಗಿಡಗಳಿಗೆ ಆಧಾರ ನೀಡಬೇಕು
- ಜಾನುವಾರುಗಳಿಗೆ ಕುಡಿಯಲು ಶುದ್ಧವಾದ ನೀರನ್ನು ನೀಡಬೇಕು

1. <u>ಗಮನಿಸಿದ ಹವಾಮಾನ</u>

**24.08.2021 ರಿಂದ 31.08.2021 ರವರೆಗಿನ ವಾರದ ಮಳೆಯ ಪ್ರಮಾಣ**

| Sl.No. | ಜಿಲ್ಲೆ | ಕಳೆದ 7 ದಿನಗಳ ಮಳೆಯ ಪ್ರಮಾಣ (ಆಗಸ್ಟ್ 24 ರಿಂದ 31 ರವರೆಗೆ) | | |
|---|---|---|---|---|
| | | ವಾಡಿಕೆ (mm) | ಪ್ರಸ್ತುತ (mm) | %ವಿಚಲನೆ |
| 1 | ಬಳ್ಳಾರಿ | 24.0 | 11.5 | -52 |
| 2 | ಕೊಪ್ಪಳ | 26.2 | 15.7 | -40 |
| 3 | ರಾಯಚೂರು | 26.9 | 31.1 | 16 |
| 4 | ಕಲಬುರ್ಗಿ | 30.1 | 88.3 | 193 |
| 5 | ಯಾದಗಿರಿ | 27.8 | 47.9 | 72 |
| 6 | ಬೀದರ | 36.3 | 73.7 | 103 |
| 7 | ಬೆಳಗಾವಿ | 20.8 | 12.9 | -38 |
| 8 | ಬಾಗಲಕೋಟೆ | 17.6 | 26.1 | 48 |
| 9 | ವಿಜಯಪುರ | 23.3 | 35.4 | 52 |
| 10 | ಗದಗ | 20.7 | 22.7 | 10 |
| 11 | ಹಾವೇರಿ | 18.5 | 23.8 | 29 |
| 12 | ಧಾರವಾಡ | 20.5 | 16.6 | -19 |
| 13 | ಉತ್ತರ ಕನ್ನಡ | 98.6 | 72.3 | -27 |


Source: KSNDMC Bengaluru

| Large Excess | +60% and above |
|---|---|
| Excess | +20 to +59% |
| Normal | +19% to -19% |
| Deficit | -20 to -59% |
| Large Deficit | -60 or less % |
| No Rainfall | (-100 %) |


ಕಳೆದ ವಾರದಲ್ಲಿ ಬೀದರ, ಕಲಬುರ್ಗಿ, ಯಾದಗಿರಿ, ಬಾಗಲಕೋಟೆ, ವಿಜಯಪುರ ಹಾಗೂ ಹಾವೇರಿ ಜಿಲ್ಲೆಯಲ್ಲಿ ಅಧಿಕ ಮಳೆಯಾಗಿದ್ದು ರಾಯಚೂರು ಗದಗ ಹಾಗೂ ಧಾರವಾಡ ಜಿಲ್ಲೆಯಲ್ಲಿ ವಾಡಿಕೆಯಷ್ಟು ಮಳೆಯಾಗಿದೆ. ಉಳಿದ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ

**24.08.2021 to 31.08.2021 ಕ್ಕೆ ಕೊನೆಗೊಳ್ಳುವ ಹವಾಮಾನ ನಿಯತಾಂಕಗಳ ಪ್ರಾದೇಶಿಕ ಹಂಚಿಕೆ**


**31.08.2021 ಕ್ಕೆ ಕೊನೆಗೊಳ್ಳುವ ಸರಾಸರಿ ಗರಿಷ್ಠ ತಾಪಮಾನ (°C)**





**31.08.2021 ಕ್ಕೆಕೊನೆಗೊಳ್ಳುವ ಸರಾಸರಿ ಕನಿಷ್ಠ ತಾಪಮಾನ(°C)**




**31.08.2021ಕ್ಕೆ ಕೊನೆಗೊಳ್ಳುವ ಸರಾಸರಿ ದೈನಂದಿನ ತಾಪಮಾನ(°C)**





**31.08.2021ಕ್ಕೆ ಕೊನೆಗೊಳ್ಳುವ ಸರಾಸರಿ ಗರಿಷ್ಠ ಆರ್ದ್ರತೆ (%)**





**31.08.2021ಕ್ಕೆ ಕೊನೆಗೊಳ್ಳುವ ಸರಾಸರಿ ಕನಿಷ್ಠ ಆರ್ದ್ರತೆ (%)**




**31.08.2021ಕ್ಕೆ ಕೊನೆಗೊಳ್ಳುವ ಗಾಳಿಯ ಸರಾಸರಿ ವೇಗ(ಕಿ/ಘ)**






**31.08.2021ಕ್ಕೆ ಕೊನೆಗೊಳ್ಳುವ ಸರಾಸರಿ ಮೋಡದ ಹೊದಿಕೆ(ಆಕ್ಟಾಗಳಲ್ಲಿ)**




* ಈ ಮೇಲ್ಕಂಡ ನಕ್ಷೆಗಳನ್ನು ವೀಕ್ಷಣಾಲಯದ ದಾಖಲೆಗಳು ಹಾಗೂ ಇಂಟರ್ಪೋಲೇಷನ್ ತಂತ್ರಗಳ ಸಹಾಯದಿಂದ ತಯಾರಿಸಲಾಗಿದೆ.


# ೧. ಕೃಷಿ ಆಧಾರಿತ ಉತ್ಪನ್ನಗಳು

<table>
<tr>
<td>34 ನೆ ವಾರಕ್ಕೆ (20.08.2021 ರಿಂದ 26.08.2021ರವರೆಗೆ) ಕೊನೆಗೊಳ್ಳುವಂತೆ NOAA/ VIIRS/ NDVI ಮಿಶ್ರಣಗಳ ಸಂಯೋಜನೆ.</td>
<td>2021 ಇಸವಿಯ 34 ಹಾಗು 33 ನೆ ವಾರಗಳಲ್ಲಿ NOAA/ VIIRS/ NDVI ಮಿಶ್ರಣಗಳ ವ್ಯತ್ಯಾಸ</td>
</tr>
<tr>
<td>


</td>
<td>


</td>
</tr>
<tr>
<td>ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಉತ್ತಮ ಕೃಷಿ ಚಟುವಟಿಕೆ ಕಂಡುಬಂದಿದೆ.</td>
<td>ಉತ್ತರ ಕರ್ನಾಟಕ ಬಾಗದ ಎಲ್ಲ ಜಿಲ್ಲೆಗಳಲ್ಲಿ ಸಾಧಾರಣ ಕೃಷಿ ಬೆಳವಣಿಗೆ ಕಂಡುಬಂದಿದೆ.</td>
</tr>
</table>

**34ನೆ ವಾರದ (20.08.2021 ರಿಂದ 26.08.2021ರವರೆಗೆ) ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿನ ಕೃಷಿ ಪ್ರದೇಶಗಳ NOAA/ VIIRS/ಸುದಾರಿತ ಸಸ್ಯವರ್ಗ ಸೂಚ್ಯಂಕಗಳ ಮಿಶ್ರಣ.**




Source: https://www.star.nesdis.noaa.gov

## ೨. ಹವಾಮಾನ ಮುನ್ಸೂಚನೆ

**ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿನ ಮದ್ಯಮವಾದಿ ಹವಾಮಾನ ಮುನ್ಸೂಚನೆ 31 ನೇ ಆಗಸ್ಟ್ 2021**

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| | ಮಳೆ(ಮಿ.ಮಿ.) | 12 | 5 | 3 | 7 | 7 |
| | ಗರಿಷ್ಠ ತಾಪಮಾನ(°C) | 28 | 29 | 31 | 31 | 30 |
| | ಕನಿಷ್ಠ ತಾಪಮಾನ (°C) | 21 | 22 | 23 | 22 | 22 |
| ಯಾದಗಿರಿ | ಗರಿಷ್ಠ ಆರ್ದ್ರತೆ (%) | 83 | 83 | 83 | 82 | 82 |
| | ಕನಿಷ್ಠ ಆರ್ದ್ರತೆ (%) | 71 | 71 | 71 | 70 | 70 |
| | ಗಾಳಿಯ ವೇಗ(ಕಿ/ಘ) | 4 | 3 | 3 | 4 | 5 |
| | ಗಾಳಿಯ ದಿಕ್ಕು(ಡಿಗ್ರಿ) | 283 | 288 | 291 | 291 | 292 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 8 | 8 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| | ಮಳೆ(ಮಿ.ಮಿ.) | 14 | 5 | 6 | 6 | 6 |
| | ಗರಿಷ್ಠ ತಾಪಮಾನ(°C) | 28 | 29 | 31 | 31 | 30 |
| | ಕನಿಷ್ಠ ತಾಪಮಾನ (°C) | 21 | 22 | 23 | 22 | 22 |
| ಕಲಬುರಗಿ | ಗರಿಷ್ಠ ಆರ್ದ್ರತೆ (%) | 83 | 83 | 83 | 82 | 82 |
| | ಕನಿಷ್ಠ ಆರ್ದ್ರತೆ (%) | 71 | 71 | 71 | 70 | 70 |
| | ಗಾಳಿಯ ವೇಗ(ಕಿ/ಘ) | 4 | 3 | 3 | 4 | 5 |
| | ಗಾಳಿಯ ದಿಕ್ಕು(ಡಿಗ್ರಿ) | 288 | 252 | 288 | 291 | 292 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 8 | 8 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| | ಮಳೆ(ಮಿ.ಮಿ.) | 5 | 2 | 5 | 6 | 5 |
| | ಗರಿಷ್ಠ ತಾಪಮಾನ(°C) | 31 | 32 | 31 | 30 | 31 |
| | ಕನಿಷ್ಠ ತಾಪಮಾನ (°C) | 23 | 22 | 21 | 20 | 21 |
| ಬಳ್ಳಾರಿ | ಗರಿಷ್ಠ ಆರ್ದ್ರತೆ (%) | 73 | 73 | 75 | 75 | 75 |
| | ಕನಿಷ್ಠ ಆರ್ದ್ರತೆ (%) | 62 | 62 | 64 | 64 | 64 |
| | ಗಾಳಿಯ ವೇಗ(ಕಿ/ಘ) | 4 | 3 | 3 | 4 | 5 |
| | ಗಾಳಿಯ ದಿಕ್ಕು(ಡಿಗ್ರಿ) | 257 | 248 | 257 | 288 | 288 |
| | ಮೋಡದ ಹೊದಿಕೆ(ಆಕ್ಟಾ) | 6 | 6 | 6 | 6 | 6 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| | ಮಳೆ(ಮಿ.ಮಿ.) | 5 | 3 | 5 | 5 | 4 |
| | ಗರಿಷ್ಠ ತಾಪಮಾನ(°C) | 26 | 27 | 27 | 28 | 28 |
| | ಕನಿಷ್ಠ ತಾಪಮಾನ (°C) | 21 | 22 | 22 | 22 | 21 |
| ಹಾವೇರಿ | ಗರಿಷ್ಠ ಆರ್ದ್ರತೆ (%) | 93 | 93 | 93 | 92 | 92 |
| | ಕನಿಷ್ಠ ಆರ್ದ್ರತೆ (%) | 87 | 87 | 87 | 86 | 86 |
| | ಗಾಳಿಯ ವೇಗ(ಕಿ/ಘ) | 5 | 4 | 5 | 5 | 6 |
| | ಗಾಳಿಯ ದಿಕ್ಕು(ಡಿಗ್ರಿ) | 249 | 248 | 248 | 252 | 257 |
| | ಮೋಡದ ಹೊದಿಕೆ(ಆಕ್ಟಾ) | 5 | 5 | 5 | 5 | 5 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| | ಮಳೆ(ಮಿ.ಮಿ.) | 21 | 22 | 23 | 23 | 28 |
| | ಗರಿಷ್ಠ ತಾಪಮಾನ(°C) | 29 | 29 | 30 | 30 | 30 |
| | ಕನಿಷ್ಠ ತಾಪಮಾನ (°C) | 24 | 24 | 25 | 25 | 24 |
| ಉತ್ತರ ಕನ್ನಡ | ಗರಿಷ್ಠ ಆರ್ದ್ರತೆ (%) | 90 | 90 | 90 | 90 | 90 |
| | ಕನಿಷ್ಠ ಆರ್ದ್ರತೆ (%) | 86 | 85 | 87 | 88 | 87 |
| | ಗಾಳಿಯ ವೇಗ(ಕಿ/ಘ) | 3 | 2 | 2 | 2 | 2 |
| | ಗಾಳಿಯ ದಿಕ್ಕು(ಡಿಗ್ರಿ) | 270 | 249 | 252 | 270 | 291 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 6 | 8 | 8 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ಧಾರವಾಡ | ಮಳೆ(ಮಿ.ಮಿ.) | 4 | 3 | 6 | 5 | 4 |
| | ಗರಿಷ್ಠ ತಾಪಮಾನ(°C) | 28 | 29 | 28 | 29 | 28 |
| | ಕನಿಷ್ಠ ತಾಪಮಾನ (°C) | 21 | 20 | 20 | 20 | 21 |
| | ಗರಿಷ್ಠ ಆರ್ದತೆ (%) | 86 | 86 | 86 | 85 | 85 |
| | ಕನಿಷ್ಠ ಆರ್ದತೆ (%) | 81 | 81 | 81 | 80 | 80 |
| | ಗಾಳಿಯ ವೇಗ(ಕಿ/ಘ) | 4 | 3 | 3 | 4 | 5 |
| | ಗಾಳಿಯ ದಿಕ್ಕು(ಡಿಗ್ರಿ) | 257 | 248 | 248 | 248 | 252 |
| | ಮೋಡದ ಹೊದಿಕೆ(ಆಕ್ಟಾ) | 7 | 6 | 5 | 6 | 6 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ಗದಗ | ಮಳೆ(ಮಿ.ಮಿ.) | 8 | 7 | 8 | 7 | 6 |
| | ಗರಿಷ್ಠ ತಾಪಮಾನ(°C) | 28 | 29 | 29 | 30 | 30 |
| | ಕನಿಷ್ಠ ತಾಪಮಾನ (°C) | 21 | 22 | 22 | 22 | 21 |
| | ಗರಿಷ್ಠ ಆರ್ದತೆ (%) | 89 | 90 | 90 | 89 | 89 |
| | ಕನಿಷ್ಠ ಆರ್ದತೆ (%) | 76 | 76 | 76 | 75 | 75 |
| | ಗಾಳಿಯ ವೇಗ(ಕಿ/ಘ) | 3 | 2 | 2 | 2 | 3 |
| | ಗಾಳಿಯ ದಿಕ್ಕು(ಡಿಗ್ರಿ) | 283 | 248 | 249 | 283 | 288 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 8 | 8 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ಕೊಪ್ಪಳ | ಮಳೆ(ಮಿ.ಮಿ.) | 0 | 4 | 5 | 4 | 6 |
| | ಗರಿಷ್ಠ ತಾಪಮಾನ(°C) | 29 | 30 | 30 | 31 | 31 |
| | ಕನಿಷ್ಠ ತಾಪಮಾನ (°C) | 20 | 21 | 21 | 21 | 20 |
| | ಗರಿಷ್ಠ ಆರ್ದತೆ (%) | 84 | 84 | 84 | 83 | 83 |
| | ಕನಿಷ್ಠ ಆರ್ದತೆ (%) | 82 | 82 | 82 | 81 | 81 |
| | ಗಾಳಿಯ ವೇಗ(ಕಿ/ಘ) | 3 | 2 | 2 | 2 | 3 |
| | ಗಾಳಿಯ ದಿಕ್ಕು(ಡಿಗ್ರಿ) | 283 | 249 | 257 | 291 | 292 |
| | ಮೋಡದ ಹೊದಿಕೆ(ಆಕ್ಟಾ) | 6 | 6 | 8 | 6 | 6 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ರಾಯಚೂರು | ಮಳೆ(ಮಿ.ಮಿ.) | 8 | 0 | 0 | 7 | 6 |
| | ಗರಿಷ್ಠ ತಾಪಮಾನ(°C) | 28 | 31 | 32 | 31 | 31 |
| | ಕನಿಷ್ಠ ತಾಪಮಾನ (°C) | 22 | 22 | 22 | 21 | 22 |
| | ಗರಿಷ್ಠ ಆರ್ದತೆ (%) | 95 | 95 | 95 | 94 | 94 |
| | ಕನಿಷ್ಠ ಆರ್ದತೆ (%) | 91 | 91 | 91 | 90 | 90 |
| | ಗಾಳಿಯ ವೇಗ(ಕಿ/ಘ) | 3 | 2 | 2 | 2 | 3 |
| | ಗಾಳಿಯ ದಿಕ್ಕು(ಡಿಗ್ರಿ) | 283 | 270 | 291 | 292 | 292 |
| | ಮೋಡದ ಹೊದಿಕೆ(ಆಕ್ಟಾ) | 6 | 6 | 6 | 6 | 6 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ಬೀದರ್ | ಮಳೆ(ಮಿ.ಮಿ.) | 12 | 11 | 3 | 11 | 12 |
| | ಗರಿಷ್ಠ ತಾಪಮಾನ(°C) | 24 | 25 | 27 | 27 | 26 |
| | ಕನಿಷ್ಠ ತಾಪಮಾನ (°C) | 18 | 19 | 20 | 19 | 19 |
| | ಗರಿಷ್ಠ ಆರ್ದತೆ (%) | 91 | 90 | 91 | 92 | 90 |
| | ಕನಿಷ್ಠ ಆರ್ದತೆ (%) | 90 | 90 | 90 | 89 | 89 |
| | ಗಾಳಿಯ ವೇಗ(ಕಿ/ಘ) | 4 | 3 | 3 | 3 | 4 |
| | ಗಾಳಿಯ ದಿಕ್ಕು(ಡಿಗ್ರಿ) | 257 | 249 | 283 | 292 | 292 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 7 | 8 |

| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
|---|---|---|---|---|---|---|
| ವಿಜಯಪುರ | ಮಳೆ(ಮಿ.ಮಿ.) | 9 | 5 | 0 | 7 | 5 |
| | ಗರಿಷ್ಠ ತಾಪಮಾನ(°C) | 29 | 30 | 30 | 31 | 32 |
| | ಕನಿಷ್ಠ ತಾಪಮಾನ (°C) | 21 | 22 | 22 | 21 | 22 |
| | ಗರಿಷ್ಠ ಆರ್ದತೆ (%) | 81 | 81 | 81 | 80 | 80 |
| | ಕನಿಷ್ಠ ಆರ್ದತೆ (%) | 73 | 73 | 73 | 69 | 69 |
| | ಗಾಳಿಯ ವೇಗ(ಕಿ/ಘ) | 5 | 6 | 5 | 5 | 6 |
| | ಗಾಳಿಯ ದಿಕ್ಕು(ಡಿಗ್ರಿ) | 283 | 252 | 283 | 292 | 292 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 8 | 8 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| ಬಾಗಲಕೋಟೆ | ಮಳೆ(ಮಿ.ಮಿ.) | 4 | 3 | 4 | 3 | 3 |
| | ಗರಿಷ್ಠ ತಾಪಮಾನ(°C) | 28 | 29 | 29 | 30 | 30 |
| | ಕನಿಷ್ಠ ತಾಪಮಾನ (°C) | 21 | 22 | 22 | 22 | 21 |
| | ಗರಿಷ್ಠ ಆರ್ದತೆ (%) | 82 | 82 | 82 | 81 | 81 |
| | ಕನಿಷ್ಠ ಆರ್ದತೆ (%) | 72 | 72 | 72 | 71 | 71 |
| | ಗಾಳಿಯ ವೇಗ(ಕಿ/ಘ) | 2 | 2 | 2 | 2 | 2 |
| | ಗಾಳಿಯ ದಿಕ್ಕು(ಡಿಗ್ರಿ) | 283 | 252 | 270 | 292 | 292 |
| | ಮೋಡದ ಹೊದಿಕೆ(ಆಕ್ಟಾ) | 6 | 6 | 6 | 6 | 6 |
| ಜಿಲ್ಲಾ | | 01.09.2021 | 02.09.2021 | 03.09.2021 | 04.09.2021 | 05.09.2021 |
| ಬೆಳಗಾವಿ | ಮಳೆ(ಮಿ.ಮಿ.) | 5 | 4 | 4 | 5 | 4 |
| | ಗರಿಷ್ಠ ತಾಪಮಾನ(°C) | 26 | 26 | 27 | 27 | 27 |
| | ಕನಿಷ್ಠ ತಾಪಮಾನ (°C) | 21 | 22 | 22 | 21 | 20 |
| | ಗರಿಷ್ಠ ಆರ್ದತೆ (%) | 84 | 84 | 83 | 83 | 83 |
| | ಕನಿಷ್ಠ ಆರ್ದತೆ (%) | 83 | 83 | 82 | 82 | 82 |
| | ಗಾಳಿಯ ವೇಗ(ಕಿ/ಘ) | 18 | 17 | 17 | 16 | 17 |
| | ಗಾಳಿಯ ದಿಕ್ಕು(ಡಿಗ್ರಿ) | 270 | 248 | 249 | 257 | 270 |
| | ಮೋಡದ ಹೊದಿಕೆ(ಆಕ್ಟಾ) | 8 | 8 | 8 | 8 | 8 |

## ಬೆಳೆಯ ಹಂತ, ಸ್ಥಿತಿ ಮತ್ತು ಪ್ರಮುಖ ಸಲಹೆಗಳು

(ಕೆಳಗಿನ ಎಲ್ಲ ಚಿತ್ರ ಹಾಗೂ ಸಲಹೆಗಳನ್ನು ಉತರ ಕರ್ನಾಟಕ ಭಾಗದ AMFU ಹಾಗೂ DAMU ಕೇಂದ್ರಗಳಿಂದ ಕ್ರೂಡೀಕರಿಸಲಾಗಿದೆ)

### ಮುಂಗಾರು ಬೆಳೆ ಹಾಗೂ ಸಲಹೆಗಳು

- ✓ ಮಳೆಯ ಪ್ರಮಾಣ ಕಡಿಮೆಯಾಗಿದ್ದಲ್ಲಿ ಬೆಳೆಗಲಿಗೆ ಅನುಸಾರವಾಗಿ ನೀರನ್ನು ಕೊಡಬಹುದು
- ✓ ಹೆಸರಿನ ಕಟಾವನ್ನು ಮಳೆ ಕಡಿಮೆಯಿರುವ ಸಮಯದಲ್ಲಿ ಕೈಗೊಳ್ಳಬಹುದು
- ✓ ಹೆಸರು ಬೆಳೆ ಶಾರೀರಿಕವಾಗಿ ವಿಕಸನ ಹೊಂದಿದಾಗ ,ಪ್ಯಾರಾಕ್ವಾಟ್ (5 ಮಿಲೀ ) ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಎಲೆಗಳು ಉದುರುವುದ್ದಲ್ಲದೆ , ಹೆಸರು ಕಾಯಿ ಬೇರಪಡಿಸಲು ಸಹಕಾರಿ ಯಾಗುತ್ತದೆ
- ✓ ಕಳೆ ನಿಯಂತ್ರಣ ಹಾಗೂ ಅಂತರ ಬೇಸಾಯ ಕೈಗೊಳ್ಳಬಹುದು
- ✓ ಬೆಳೆಯುವ ಹಂತದಲ್ಲಿರುವ ಗಿಡಗಳಿಗೆ ಮೇಲು ಗೊಬ್ಬರ ನೀಡಬಹುದು
- ✓ ಕೊರತೆ ಪೂರೈಸಲು ತೊಗರಿ, ಉದ್ದು, ಹೆಸರು ಮತ್ತು ಸೋಯಾ ಅವರೆ ಬೆಳೆಯಲ್ಲಿ ಶೇ. 1ರ (10 ಗ್ರಾಂ ಪ್ರತೀ ಲೀಟರ್ ಗೆ ) 13:0:45 ಅಥವಾ ಯೂರಿಯಾ ಸಿಂಪಡಣೆ ಕೈಗೊಳ್ಳಬೇಕು
- ✓ 45 ರಿಂದ 50 ದಿನಗಳ ತೊಗರಿಯಲ್ಲಿ ಕುಡಿ ಚಿವುಟುವುದರಿಂದ ಗಿಡಗಳ ಬೆಳವಣಿಗೆಗೆ ಸಹಕಾರಿಯಾಗುವುದು
- ✓ ಸಸ್ಯ ಸಂರಕ್ಷಣಾ ಕ್ರಮಗಳನ್ನು ಒಣ ಹವಾಮಾನದಲ್ಲಿ ಕೈಗೊಳ್ಳಿ

## ಮುಸುಕಿನ ಜೋಳ



AMFU, ಧಾರವಾಡ: ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ಬಾಧೆ

- ✓ ಕಬ್ಬಿಣ ಮತ್ತು ಸತುವಿನ ಕೊರತೆ ಕಂಡುಬಂದಲ್ಲಿ ಶೇ. 0.5 ಸತುವಿನ ಸಲ್ಫೇಟ್ ಮತ್ತು 0.5 ರ ಕಬ್ಬಿಣದ ಸಲ್ಫೇಟ್ ಅನ್ನು ಬಿತ್ತಿದ 30–40 ದಿನಗಳಲ್ಲಿ ಸಿಂಪರಣೆ ಮಾಡಬೇಕು. ಈ ಮಿಶ್ರಣಕ್ಕೆ ಶೇ. 1 ರ ಸುಣ್ಣದ ತಿಳಿನೀರನ್ನು ಸೇರಿಸಬೇಕು
- ✓ ಸೈನಿಕಹುಳುವಿನ ಹತೋಟಿಗೆ: 0.3 ಗ್ರಾಂ.ಇಮಾಮೆಕ್ಟಿನ್ ಬೆಂಜೋಯೇಟ್ 5 % ಎಸ್.ಜಿ ಅಥವಾ 0.2 ಮಿ.ಲೀ. ಕ್ಲೋರಾಂಟ್ರಾನಿಲಿಪ್ರೋಲ್ 18.5 ಎಸ್.ಸಿ ಪ್ರತೀ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು.
- ✓ ಗೋವಿನಜೋಳದಲ್ಲಿ ಗೊಣ್ಣೆಹುಳುವಿನ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿಗೆ 10 ಮಿ.ಲೀ ಕ್ಲೋರ್ಪೈರಿಪಾಸ್ ಕೀಟನಾಶಕವನ್ನು ಬೆರೆಸಿ ಬೆಳೆಯ ಬುಡದಲ್ಲಿ ಭೂಮಿ ನೆನೆಯುವಂತೆ ಹಾಕಬೇಕು
- ✓ ಜೈವಿಕ ಕ್ರಮವಾಗಿ ಪ್ರತಿ ಹೆಕ್ಟೇರಿಗೆ 5 ರಿಂದ 10 ಕಿ.ಗ್ರಾಂ. ಮೆಟಾರೈಝಿಯಂ ಶಿಲೀಂದ್ರವನ್ನು 100 ಕಿಲೋ ಚೆನ್ನಾಗಿ ಕಳಿತ ಕೊಟ್ಟಿಗೆ ಗೊಬ್ಬರದೊಂದಿಗೆ ಮಿಶ್ರಣ ಮಾಡಿ ಮಣ್ಣಿಗೆ ಸೇರಿಸಿ ನೀರು ಹಾಯಿಸಬೇಕು

## ಸೋಯಾಅವರೆ




AMFU, ಬೀದರ : ಕಾಳು ಕಟ್ಟುವ ಹಂತದಲ್ಲಿರುವ ಸೋಯಾ ಅವರೆ

- ✓ ಸೋಯಾಬೀನ್ ತುಕ್ಕು ನಿಯಂತ್ರಣಕ್ಕೆ 1 ಮಿ.ಲೀ. ಹೆಕ್ಸಾಕೊನಾಜೋಲ್ 5 ಇ.ಸಿ. ಅಥವಾ 1 ಮಿ ಲೀ.ಪ್ರೋಪಿಕೊನಾಜೋಲ್ 25 ಇಸಿ. ಅಥವಾ 0.5 ಗ್ರಾಂ ಟೆಬುಕೊನೊಜೋಲ್ + ಟ್ರೈಪ್ಲಾಕ್ಸಿಸ್ಟ್ರೋಬಿನ್ ಸಂಯುಕ್ತ ಶಿಲೀಂದ್ರನಾಶಕ (ನೇಟಿವೊ) 75 ಡಬ್ಲೂ. ಜಿ. ಪ್ರತೀ ಲೀಟರ್ ನೀರಿಗೆ ಬೆರೆಸಿ 15 ದಿನಗಳ ಅಂತರದಲ್ಲಿ 2 ಬಾರಿ ಸಿಂಪಡಿಸಬೇಕು. ತುಕ್ಕು ರೋಗದ ನಿರೋಧಕ ಶಕ್ತಿ ಹೊಂದಿರುವ ತಳಿಗಳಾದ ಡಿ. ಎಸ್. ಬಿ. 21, ಡಿ. ಎಸ್. ಬಿ. 22 ಮತ್ತು ಡಿ. ಎಸ್. ಬಿ. 34 ತಳಿಗಳು ರೋಗ ಪೀಡಿತ ಪ್ರದೇಶದಲ್ಲಿ ಬೆಳೆಯುವುದರಿಂದ ಶಿಲೀಂದ್ರನಾಶಕಗಳ ಸಿಂಪಡಣೆಯ ಅವಶ್ಯಕತೆ ಇರುವುದಿಲ್ಲ

## ಶೇಂಗಾ

- ✓ ಶೇಂಗಾ ಬೆಳೆಯಲ್ಲಿ ಎಲೆ ಸುರುಳಿ ಪೂಚಿ ಕೀಟದ ನಿಯಂತ್ರಣಕ್ಕಾಗಿ 2 ಮಿ.ಲೀ. ಪ್ರೋಫೆನೋಫಾಸ್ 50 ಇ.ಸಿ ಅಥವಾ 0.075 ಮಿ.ಲೀ ಫ್ಲೂಬೆಂಡಿಯಾಮೈಡ್ 39.35 ಎಸ್.ಸಿ ಅಥವಾ 0.12 ಮಿ.ಲೀ ಸ್ಪೈನೊಸಾಡ್45 ಎಸ್.ಸಿ. ಅಥವ 1 ಮಿ.ಲೀ. ಮೊನೋಕ್ರೋಟೊಫಾಸ್ 36 ಎಸ್.ಎಲ್. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಿ



**ಶೇಂಗಾದಲ್ಲಿ ಸುರುಳಿ ಪೂಚಿ ಬಾಧೆ**

- ✓ ಶೇಂಗಾ ಬಿತ್ತಿದ 35–45 ದಿನಗಳ ನಂತರ ಕೊನೆಯ ಎಡೆಕುಂಟೆ ಹೊಡೆಯುವಾಗ ಜಿಪ್ಸಮ್ ಉಪ್ಪನ್ನು 200 ಕಿ.ಗ್ರಾಂ. ಪ್ರತಿ ಎಕರೆಗೆ ಬೆಳೆಯ ಸಾಲಿನ ಎರಡೂ ಬದಿಗೆ ಕೊಡಬೇಕು
- ✓ 50 ರಿಂದ 70 ದಿನದ ಶೇಂಗಾ ಬೆಳೆಯಲ್ಲಿ ಎಲೆ ತಿನ್ನುವ ಕೀಟದ ಬಾಧೆ ಅಧಿಕವಾಗಿ ಕಂಡು ಬಂದರೆ 0.2 ಗ್ರಾಂ ಇಮಾಮೆಕ್ಟಿನ್ ಬೆಂಜೊಯೇಟನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು
- ✓ ಶೇಂಗಾದಲ್ಲಿ ಸ್ಪೋಡೋಪ್ಟೆರಾ ಹತೋಟಿಗೆ 4 ಗ್ರಾಂ. ಮೆಟರಿಜಿಯಂ ರಿಲ್ಲೆ ಅಥವಾ 0.2 ಗ್ರಾಂ. ಇಮಾಮೆಕ್ಟಿನ್ ಬೆಂಜೋಯೇಟ್ 5 SG ಅಥವಾ 1 ಗ್ರಾಂ. ಥೈಯೊಡಿಕಾರ್ಬ್ ಪ್ರತಿ

ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು

## ಭತ್ತ



DAMU ಕೊಪ್ಪಳ: ಬೆಳವಣಿಗೆ ಹಂತದಲ್ಲಿರುವ ಭತ್ತ

- ಭತ್ತದಲ್ಲಿ ಕಾಂಡಕೊರೆಯುವ ಹೂಳ ನಿಯಂತ್ರಣಕ್ಕಾಗಿ 2 ಮಿ.ಲೀ ಕ್ಲೋರೊಪೈರಿಫಾಸ್ 20 ಇ. ಸಿ. ಅಥವಾ 2 ಮಿ.ಲೀ ಪ್ರೊಫೆನೊಫಸ್ 50 ಇ. ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು
- ಆನೆಕೊಂಬು/ಕಣೆನೋಣ ಹತೋಟಿಮಾಡಲು 2.5 ಮಿ.ಲೀ ಕಾರ್ಬೋಸ್ಫಾನ್ 25 ಇ.ಸಿ ಅಥವಾ 1 ಮಿ.ಲೀ. ಫಿಪ್ರೋನಿಲ್ 5 ಎಸ್.ಸಿ ಪ್ರತಿ ಲೀಟರ್ ನೀರಿಗೆ ಅಥವಾ 10 ಕೆ.ಜಿ ಕಾರ್ಬೋಫ್ಯೂರಾನ್ 3 1 ಎಕೆರೆಗೆ ಎರಚಬೇಕು
- ಕೆಲವೊಂದು ಬಾಗದಲ್ಲಿ ಭತ್ತದ ಬೆಳೆಯು ಮರಿಯೊಡಿಯುವ ಹಂತ (ನಾಟಿಯಾದ 25–30 ದಿವಸಗಳು) ದಲ್ಲಿದ್ದು, ಇಂತಹ ಬೆಳೆಗೆ ಮೇಲುಗೊಬ್ಬರವಾಗಿ 18.75 ಕೆ.ಜಿ ಸಾರಜನಕ ಮತ್ತು 43.75 ಕೆ.ಜಿ ಪೋಟಾಷ್ ಒದಗಿಸುವ ಗೊಬ್ಬರವನ್ನು ಕೊಡಬೇಕು. ಮೇಲುಗೊಬ್ಬರ ಕೊಡುವ ಮೊದಲು ಗದ್ದೆಯಲ್ಲಿನ ನೀರನ್ನು ಬಸಿದು. ಗೊಬ್ಬರ ಕೊಟ್ಟ 24 ಗಂಟೆಗಳ ನಂತರ ನೀರು ಕಟ್ಟಬೇಕು.

## ಹತ್ತಿ



AMFU, ಬೀದರ: ಹೂವಾಗುವ ಹಂತದಲ್ಲಿರುವ ಹತ್ತಿ

- ಪೋಷಕಾಂಶಗಳ ಕೊರತೆ ಪೂರೈಸಲು 19:19:19 ಅಥವಾ 13:0:45 @5 ಗ್ರಾಂ 30–35 ದಿನದ ಬೆಳೆಗೆ ಮತ್ತು 10 ಗ್ರಾಂ 45–60 ದಿನದ ಬೆಳೆಗೆ ಸಿಂಪಡಿಸಬೇಕು
- ಹತ್ತಿಯಲ್ಲಿ ಎಲೆ ಕೆಂಪಾಗುವಿಕೆಯನ್ನು ಕಡಿಮೆ ಮಾಡಲು ಶೇ. 1 ರ ಮೆಗ್ನೀಶಿಯಂ ಸಲ್ಫೇಟ್ (10 ಗ್ರಾಂ ಪ್ರತೀ ಲೀಟರ್ ನೀರಿಗೆ) ಸಿಂಪಡಿಸಬೇಕು
- ಸುರುಳಿ ಪೂಚಿ ಹಾಗೂ ಕಾಂಡ ಕೊರಕ ಬಾಧೆಯ ಹತೋಟಿಗಾಗಿ ಸೋಲೋಮನ್ 300 ಡಿ (1ಮಿ.ಲೀ. ಪ್ರತಿ ಲೀಟರ್ ಗೆ) ಹಾಗೂ ಫ್ರೋಪೆನೋಫಾಸ್+ ನೂವಾನ್ (2ಮಿ.ಲೀ. ಪ್ರತೀ ಲೀಟರ್ ಗೆ+ 0.5 ಮಿ.ಲೀ. ಕ್ರಮವಾಗಿ) ಬಳಸಬೇಕು
- ಹತ್ತಿಯಲ್ಲಿ ಸಸ್ಯ ಹೇನು ಮತ್ತು ಬಿಳಿ ನೊಣದ ಹತೋಟಿಗಾಗಿ ಎಕರೆಗೆ 20 ರಂತೆ ಹಳದಿ ಬಣ್ಣದ ಪಂಚಿನ ಬಲೆಗಳನ್ನು ಉಪಯೋಗಿಸಬೇಕು
- ಹತ್ತಿಯಲ್ಲಿ ರಸ ಹಿರುವ ಕೀಟಗಳ ಹತೋಟಿಗಾಗಿ 0.3 ಗ್ರಾಂ. ಫ್ಲೋನಿಕಮೈಡ್ 50 ಡಬ್ಲ್ಯೂ.ಜಿ ಅಥವಾ 0.3 ಗ್ರಾಂ. ಡೈನೊಟೆಫ್ಯುರಾನಾ 20 ಎಸ್.ಜಿ ಅಥವಾ 1 ಮಿ.ಲೀ. ಅಸಿಟಾಮಿಪ್ರಿಡ್ 20 ಎಸ್.ಪಿ ಅಥವಾ 0.2 ಗ್ರಾಂ. ಥೈಯಾಮೆಥಾಕ್ಸಾಮ್ 25 ಡಬ್ಲ್ಯೂ.ಜಿ. ಯನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

## ಕಬ್ಬು

- ✓ ಬೆಳೆಯ ಬೆಳವಣಿಗೆ ಉತ್ತಮವಾಗಲು, ಸಾರಜನಕ ಮತ್ತು ಪೊಟಾಷ್ ಒದಗಿಸುವ ರಸಗೊಬ್ಬರವನ್ನು ಕೊಡಬೇಕು.
- ✓ ಕಬ್ಬಿನಲ್ಲಿ ಉರಿಮಲ್ಲಿಗೆ ಕಳೆ ನಿಯಂತ್ರಣಕ್ಕಾಗಿ ಚೆನ್ನಾಗಿ ನೀರು ಹಾಯಸಬೇಕು, ಹಾಗೂ ರವದಿ ಹೊಡಿಸಬೇಕು ನಂತರ 2,4–ಡಿ ಸೋಡಿಯಂ ಉಪ್ಪು 1 ಕಿ.ಗ್ರಾಂನ್ನು 500 ಲೀ. ನೀರಿಗೆ ಬೆರೆಸಿ ಕಳೆಯ ಮೇಲೆ ಸಿಂಪಡಿಸಬೇಕು ಅಥವಾ ಪ್ರತಿಶತ 20 ರ ಯೂರಿಯಾ ದ್ರಾವಣವನ್ನು ಕಳೆಯ ಮೇಲೆ ಸಿಂಪಡಿಸಬೇಕು.
- ✓ ಗೊಣ್ಣೆ ಹುಳುವಿನ ನಿರ್ವಹಣೆಗಾಗಿ 5 ಗ್ರಾಂ ಮೆಟರೈಜಿಯಂ ಅನಿಸೋಪ್ಲಿಯ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು
- ✓ ಕಬ್ಬಿನಲ್ಲಿ ತಕ್ಕು ರೋಗದ ಬಾಧೆ ಕಂಡುಬಂದರೆ ರೋಗವನ್ನು ನಿಯಂತ್ರಿಸಲು ಗಾಳಿಯಾಡುವಂತೆ ವ್ಯವಸ್ಥೆ ಮಾಡಬೇಕು. ರಾಸಾಯನಿಕ ಗೊಬ್ಬರಗಳ ಅದರಲ್ಲೂ ಸಾರಜನಕಯುಕ್ತ ಗೊಬ್ಬರಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು. ರಾಸಾಯನಿಕ ಕ್ರಮವಾಗಿ ಪ್ರತಿ ಲೀಟರ್ ನೀರಿಗೆ 1 ಮಿ.ಲೀ. ಹೆಕ್ಸಾಕೋನೊಝೋಲ್ ಅಥವಾ 1 ಮಿ.ಲೀ. ಪ್ರೋಪಿಕೋನೊಝೋಲ್ ಅಥವಾ 0.5

ಗ್ರಾಂ ಟೆಬ್ಯುಕೋನಾರ್ಝೋಲ್ ಅಥವಾ 0.5 ಗ್ರಾಂ ಟೆಬ್ಯುಕೋನಾರ್ಝೋಲ್ ಟ್ರಿಫ್ಲಾಕ್ಸಿಸ್ಟ್ರೋಬಿನ್(ನೇಟಿವೋ) ಸಂಯುಕ್ತ ಶಿಲಿಂದ್ರನಾಶವನ್ನು ಸಿಂಪಡಣೆ ಮಾಡಬೇಕು

**ತೋಟಗಾರಿಕಾ ಬೆಳೆಗಳು**

**ಅಡಿಕೆ**

- ✓ ಮುಂಜಾಗ್ರತಾ ಕ್ರಮವಾಗಿ ಅಡಿಕೆಯಲ್ಲಿ ಕೊಳೆ ರೋಗ ನಿಯಂತ್ರಣಕ್ಕಾಗಿ ಅಡಿಕೆ ಕೊನೆಗೆ ಶೆ. 1 ರ ಬೋರ್ಡೋ ದ್ರಾವಣವನ್ನು ಸಿಂಪಡನೆ ಮಾಡಬೇಕು
- ✓ ಕಾಯಿ ಉದುರುವಿಕೆ ತಡೆಯಲು 1 ಗ್ರಾಂ ಕಾರ್ಬನ್ ಡೈಜಿಮ್ ಅಥವಾ 2 ಗ್ರಾಂ ಮ್ಯಾಂಕೊಜೆಬ್ ಪ್ರತಿ ಲೀಟರ್ ನೀರಿಗೆ ಪ್ಲಾನೋಫಿಕ್ಸ @ 0.25 ಮಿ.ಲೀ./ಲೀ. ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು
- ✓ ಬಲಿತ ಹಾಗೂ ರೋಗ ರಹಿತ ಅಡಿಕೆ ಗಿಡಗಳನ್ನು ಸಸಿ ಮಡಿಗಳಿಂದ ಕಿತ್ತು ತೋಟದಲ್ಲಿ ನೆಡಲು ಸೂಕ್ತವಾದ ಸಮಯ

**ಮಾವು/ ಪೇರಲೆ/ ಪಪ್ಪಾಯ**



ಬಸವನ ಬಾಗೇವಾಡಿ: ಹೊಲದಲ್ಲಿ ನೆಡಲಾದ ಪಪ್ಪಾಯ ಸಸಿ

- ✓ ತೋಟಗಾರಿಕೆ ಹಣ್ಣಿನ ಗಿಡಗಳಲ್ಲಿ ಅತೀ ಮಳೆಯಿಂದ ಹಾನಿಗೊಳಗಾದ ಗಿಡದ ಭಾಗಗಳನ್ನು ಛಾಟನಿ/(ಕತ್ತರಿಸಿ) ತೆಗೆಯಬೇಕು.
- ✓ ಮಾವು/ ಪೇರಲ/ಪಪ್ಪಾಯ ಗಿಡಗಳನ್ನು ನೆಡಲು ಸೂಕ್ತ ಸಮಯ
- ✓ ಭೂಮಿಯನ್ನು ಚೆನ್ನಾಗಿ ಸಿದ್ಧಪಡಿಸಿಕೊಂಡು ಶೀಪಾರಸ್ಸು ಮಾಡಿದ ಅಂತರದಲ್ಲಿ 90X90X90 ಸೆಂ. ಮೀ ಗಾತ್ರದ ಗುಣಿಗಳನ್ನು ತೆಗೆಯಬೇಕು.
- ✓ ಸಮ ಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ ಹಾಗೂ ಮಣ್ಣಿನ ಮಿಶ್ರಣದಿಂದ ಗುಣಿಗಳನ್ನು ತುಂಬಿ ಕಸಿ ಮಾಡಿದ ಮಾವು ಹಾಗೂ ಪೇರಲ ಗಿಡಗಳನ್ನು ಗುಣಿಯ ಮಧ್ಯದಲ್ಲಿ ಕಸಿ ಮಾಡಿದ ಭಾಗ ಗುಣಿಯ ಭೂಮಿಯ ಮೇಲೆ ಇರುವಂತೆ ನಾಟಿ ಮಾಡಬೇಕು
- ✓ ಪಪ್ಪಾಯ ಸಸಿ ನೆಟ್ಟ 6 ತಿಂಗಳಲ್ಲಿ ಕಳೆ ನಿಯಂತ್ರಿಸಲು ಕಡಿಮೆ ಅವಧಿಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯಬಹುದು

**ಟೊಮ್ಯಾಟೊ/ಮೆಣಸಿನಕಾಯಿ/ಬದನೆಕಾಯಿ**

- ✓ ಮೆಣಸಿನ ಗಿಡಕ್ಕೆ ಬರುವ ಸಸಿ ಸಾಯುವ ರೋಗವನ್ನು ಹತೋಟಿ ಮಾಡಲು 3 ಗ್ರಾಂ. ಕ್ಯಾಪ್ಟನ್ ಅಥವಾ 2 ಗ್ರಾಂ. ಕಾರ್ಬೆಂಡಾಜಿಮ್ ಶೀಲಿಂದ್ರನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿದ ದ್ರಾವಣವನ್ನು ಸಸಿ ಮಡಿಗೆ ಹಾಕಬೇಕು
- ✓ ಟೊಮ್ಯಾಟೊ ಬೆಳೆಯಲ್ಲಿ ಬೂದುರೋಗದ ಬಾಧೆ ಕಂಡುಬಂದಲ್ಲಿ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕವನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು

ಟೊಮೇಟೊ ಹಣ್ಣು ಕೊರಕದ ಹತೋಟಿ ಕ್ರಮಗಳು

- ✓ ಪ್ರತಿ ಎರಡು ಸಾಲು ಟೊಮೇಟೊ ಬೆಳೆಯ ಮಧ್ಯದಲ್ಲಿ ಮೂಲಂಗಿ ಬೆಳೆ (ಹೊದಿಕೆ ರೊಪದಲ್ಲಿ )ಬೆಳೆಯುವುದರಿಂದ ಹಣ್ಣು ಕೊರಕದ ಬಾದ್ಧೆಯನ್ನು ತಡೆಯಬಹುದು
- ✓ ಅಲ್ಲದೆ ಪ್ರತಿ 25 ಸಾಲುಗಳ ಮದ್ಯ ಚಂಡು ಹೂವು ಬೆಳೆಯುವುದರಿಂದ ಹಣ್ಣು ಕೊರಕದ ಬಾದ್ಧೆಯನ್ನು ಶೇ . 10–15 ವರೆಗೆ ಕಡಿಮೆಗೊಳಿಸಬಹುದು



AMFU, ವಿಜಯಪುರ: ಹೂವಿನ ಹಂತದಲ್ಲಿರುವ ಬದನೆ



AMFU, ಬೀದರ: ಕಾಯಿ ಬೆಳೆಯುವ ಹಂತದಲ್ಲಿರುವ ಟೊಮ್ಯಾಟೊ



AMFU, ವಿಜಯಪುರ: ಹೂವು ಮತ್ತು ಕಾಯಿಯ ಹಂತದಲ್ಲಿರುವ ಮೆಣಸಿನಕಾಯಿ

**ಜಾನುವಾರುಗಳು**

**ಹಸು/ಎಮ್ಮೆ**

- ✓ ಜಾನುವಾರುಗಳಿಗೆ ಕುಡಿಯಲು ಶುದ್ದವಾದ ನೀರನ್ನು ಕೊಡಬೇಕು
- ✓ ಜಾನುವಾರುಗಳನ್ನು ಮಳೆಯ ನೀರು ತಾಗದಂತೆ ಬೆಚ್ಚನೆಯ ಸ್ಥಳದಲ್ಲಿ ಕಟ್ಟಬೇಕು
- ✓ ಹತ್ತಿರದ ಪಶುವೈದ್ಯರ ಸಲಹೆಯಂತೆ ಜಂತು ಹುಳು ನಿಯಂತ್ರಣದ ಕ್ರಮ ಕೈಗೊಳ್ಳಬೇಕು
- ✓ ದನ ಕರುಗಳಿಗೆ ಹಸಿರು ಮೇವನ್ನು ಒದಗಿಸಲು ಮೆವಿನ ಜೋಳ, ಮೇಕ್ಕೆ ಜೋಳ, ಅಲಸಂಧಿ ಹಾಗೂ ಕಡಿಮೆ ಅವದಿಯ ಸಜ್ಜೆಯನ್ನು ಬೆಳೆಯಿರಿ

**ಕುರಿ/ ಆಡು**

- ✓ 2–3 ತಿಂಗಳಿಗೊಮ್ಮೆ ಜಂತುನಾಶಕ ಔಷಧಿಯನ್ನು ನೀಡಬೇಕು




**ಕುರಿಗಳಲ್ಲಿ ನೀಲಿ ನಾಲಿಗೆ ರೋಗ:**

- ✓ ಮಳೆಗಾಲ/ ಅನಂತರದ ದಿನಗಳಲ್ಲಿ, ಜೌಗು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ

**ಚಿಕಿತ್ಸೆ ಹಾಗೂ ಮುಂಜಾಗ್ರತಾ ಕ್ರಮಗಳು:**

- ✓ ರೋಗ ಕಂಡು ಬಂದ ಕುರಿಗಳನ್ನು ಆರೋಗ್ಯವಂತ ಕುರಿಗಳಿಂದ ಪ್ರತ್ಯೇಕಿಸಬೇಕು
- ✓ ಸೂಕ್ತ ಆರೈಕೆಗಾಗಿ ರಾಗಿ ಗಂಜಿ, ಮೆದುವಾದ ಹುಲ್ಲು ಮತ್ತು ಸೊಪ್ಪನ್ನು ನೀಡಬೇಕು
- ✓ ಕೂಡಲೇ ಪಶುವೈದ್ಯರಿಂದ ಸೂಕ್ತ ಔಷದೋಪಚಾರ ಮಾಡಿಸಿ

-------------*************-------------